ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **1254 /2023**

| | | | |
|---|---|---|---|
| ಸಾಕ್ಷಿಯ ಹೆಸರು | : ಕೃಷ್ಣನಾಯಕ್ | | ಸಿ.ಡಬ್ಲ್ಯು 1 |
| ತಂದೆಯ ಹೆಸರು | : ಖಂಡ್ಯನಾಯಕ್ | | ಪಿ.ಡಬ್ಲ್ಯು 1 |
| ವಯಸ್ಸು | : 41 ವರ್ಷ | | |
| ಉದ್ಯೋಗ | : ಪಿ.ಎಸ್.ಐ | | |
| ವಾಸ ಸ್ಥಳ | : ಅಜ್ಜಂಪುರ | | |

ದಿನಾಂಕಃ**12-11-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು 2021 ನೇ ಸಾಲಿನಿಂದ 2024 ಜುಲೈ ವರೆಗೆ ತರೀಕೆರೆಯಲ್ಲಿ ಪಿ ಎಸ್ ಐ ಆಗಿ ಕೆಲಸ ಮಾಡಿದ್ದೇನೆ. ಈ ಪ್ರಕರಣದಲ್ಲಿ ದಿನಾಂಕ 16-08-2023 ರಂದು ಮದ್ಯಾಹ್ನ 3-15 ರ ಸುಮಾರಿಗೆ ಚಾಸಾ-2 ಮತ್ತು 3 ರವರೊಂದಿಗೆ ಇಲಾಖಾ ವಾಹನದಲ್ಲಿ ನಗರದಲ್ಲಿ ಗಸ್ತು ಕರ್ತವ್ಯದಲ್ಲಿ ಇದ್ದಾಗ ಕೋಡಿಕ್ಯಾಂಪ್ ನ 3 ನೇ ಕ್ರಾಸ್ ನಲ್ಲಿ ಒಬ್ಬ ವ್ಯಕ್ತಿ ಮಟ್ಕಾ ಎಂಬ ಜೂಜಾಟವನ್ನು ಆಡಿಸುತ್ತಿದ್ದಾನೆ ಎಂಬ ಮಾಹಿತಿಬಂದ ಮೇರೆಗೆ ಸರ್ಕಲ್ ನಲ್ಲಿ ಇದ್ದ ಚಾಸಾ-4 ಮತ್ತು 5 ಇವರನ್ನು ಕರೆದುಕೊಂಡು ಮಾಹಿತಿ ಬಂದ ಸ್ಥಳಕ್ಕೆ ಹೋದೆವು ಅಲ್ಲಿ ಒಬ್ಬ ವ್ಯಕ್ತಿಯು ಸಾರ್ವಜನಿಕರಿಂದ ಹಣ ಪಡೆದುಕೊಂಡು ಚೀಟಿಯಲ್ಲಿ ಏನೋಬರೆದುಕೊಳ್ಳುತ್ತಿರುವುದು ಕಂಡುಬಂತು. ಹಾಗೂ ಹಣದ ಆಮಿಷವನ್ನು ತೋರಿಸುತ್ತಿರುವುದು ಗೊತ್ತಾಯಿತು. ಕೂಡಲೇ ವ್ಯಕ್ತಿಯನ್ನು ಹಿಡಿದುಕೊಂಡು ವಿಚಾರಿಸಲಾಗಿ, ತಾನು ಮಟ್ಕಾ ನಂಬರುಗಳನ್ನು ಬರೆದುಕೊಳ್ಳುತ್ತಿರುವುದಾಗಿ ತಿಳಿಸಿದನು. ಆತನ ಬಳಿ ಮಟ್ಕಾ ನಂಬರ್ ಗಳನ್ನು ಬರೆದ ಚೀಟಿ, 590 ರೂ. ನಗದುಹಣ ಮತ್ತು ಒಂದು ಬಾಲ್ ಪೆನ್ನು ಇದ್ದವು. ವಿಚಾರಿಸಲಾಗಿ ತನ್ನ ಹೆಸರನ್ನು ಕೃಷ್ಣ ಟಿ ಎಂದು ತಿಳಿಸಿದನು. ಸದರಿ ಹಣ ಮತ್ತು ಚೀಟಿಯನ್ನು 2 ನೇ ಆರೋಪಿಗೆ ಕೊಡುವುದಾಗಿ ತಿಳಿಸಿದನು, ಕಾರಣ ಸ್ಥಳದಲ್ಲಿ 4-00 ರಿಂದ 5-00 ಗಂಟೆ ಮದ್ಯದಲ್ಲಿ ಪಂಚನಾಮೆಯನ್ನು ಜರುಗಿಸಿ ಮೇಲೆ ಹೇಳಿದ ವಸ್ತುಗಳನ್ನು ಮತ್ತು ಆರೋಪಿಯನ್ನು ನನ್ನ ವಶಕ್ಕೆ ಪಡೆದುಕೊಂಡು ಚಾಸಾ-6 ರವರ ಮುಂದೆ ಹಾಜರುಪಡಿಸಿ ಸರ್ಕಾರದ ತರ್ಫೆ ನಾನೇ ಫಿರ್ಯಾದಿಯನ್ನು ಕೊಟ್ಟಿರುತ್ತೇನೆ. ಸ್ಥಳ ಮತ್ತು ಅಮಾನತ್ತುಪಂಚನಾಮೆಯನ್ನು ನಿ.ಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-1(ಎ), ದೂರನ್ನು ನಿ.ಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ನಗದು ಹಣ ರೂ.590/-ಗಳನ್ನು ಮು.ಮಾ-1 ಎಂದು, ಮಟ್ಕಾ ಚೀಟಿಯನ್ನು ಮು.ಮಾ-2, ಬಾಲ್ ಪೆನ್ನನ್ನು ಮು.ಮಾ-3 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ **2** ನೇ ಆರೋಪಿತರ ಪರ ವಕೀಲರಿಂದಃ

ಮಹಜರಿಗೆ ಅಂದರೆ ನಿ.ಪಿ-1 ಕ್ಕೆ ಚಾಸಾ-2 ಮತ್ತು 3 ರವರು ಕೂಡ ಸಹಿ ಮಾಡಿರಬಹುದು, ನನಗೆ ನೆನಪಿಲ್ಲ. ಅವರುಗಳು ನಿ.ಪಿ-1 ಕ್ಕೆ ಸಹಿ ಮಾಡಿಲ್ಲ ಎಂದರೆ, ನೆನಪಿಲ್ಲ. ಹಾಗಾಗಿ ನಾನಾಗಲೀ, ಅವರಾಗಲೀ ಯಾವುದೇ ದಾಳಿಗೆ ಹೋಗಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯ ಮಾಹಿತಿಯ ಆಧಾರದ ಮೇಲೆ 2 ನೇ ಆರೋಪಿಯ ಮೇಲೆ ದೂರು ಕೊಟ್ಟಿದ್ದೇನೆ ಎಂದರೆ ಸರಿ. ಆ ರೀತಿ ಯಾವುದೇ ಮಾಹಿತಿ 1 ನೇ ಆರೋಪಿ ನನಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ಎಂದು ಗೊತ್ತಿದ್ದರೂ ಕೂಡ ಸುಳ್ಳು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ದಾಳಿಗೆ ಹೋಗುವ ಪೂರ್ವದಲ್ಲಿ ಪರವಾನಗೆ ಪಡೆದುಕೊಂಡಿಲ್ಲ ಆದರೆ ಪ್ರಕರಣವನ್ನು ದಾಖಲಿಸಿ ತನಿಖೆ ನಡೆಸಲು ಚಾಸಾ-6 ಅಥವಾ 7 ರವರು ಪರವಾನಗೆ ಪಡೆದುಕೊಂಡಿರಬಹುದು. ಪ್ರಕರಣಕ್ಕೂ, ಆರೋಪಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ :</u> ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ

**ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.
ಸಿಸಿ ನಂಬರ್ **/202**

ಸಾಕ್ಷಿಯ ಹೆಸರು : ಸಿ.ಡಬ್ಲ್ಯು
ತಂದೆಯ ಹೆಸರು : ಪಿ.ಡಬ್ಲ್ಯು
ವಯಸ್ಸು : ವರ್ಷ
ಉದ್ಯೋಗ :
ವಾಸ ಸ್ಥಳ :

ದಿನಾಂಕಃ**04-10-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು 2019 ರಿಂದ 2024 ರವರೆಗೆ

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದ

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಮರುವಿಚಾರಣೆ : ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.